Reg No BG 155 ಶ್ರೀ 11-1-1969

52nd Year of Publication

SATYAVADI Daily, MYSORE 4

ಸತ್ಯವಾದಿ

ಪರಶುರಾಂ ಹಾಲ್

ಸಯ್ಯಾಜಿರಾವ್ ರೋಡ್, ಮೈಸೂರು

ಹಬ್ಬಕ್ಕೆ ಆಕರ್ಷಣೀಯವಾದ ಬಟ್ಟೆಗಳು ನಿಮಗೆ ಬೇಕಾದ್ದನ್ನು ತೆಗೆದುಕೊಳ್ಳಿ ಬಂದಿವೆ. ಸರಿಯಾದ ಬೆಲೆಗೆ ಹೊರೆಯುತ್ತೆ

ಸ್ಥಾಪಕರು : ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

❁ ಚುನಾವಣೆಗೆ ಸಹಪ್ರಗಟ್ಟೆ ಸ್ಪರ್ಧೆಗಳು ❁

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಜೀಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ಸೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಸೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ.ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನಸೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಓವರ್‌ಡ್ರಾಫ್ಟ್ ಇಲ್ಲ

ತಿರುವನಂತಪುರಂ— ಕೇರಳವು ರಿಜರ್ವ್ ಬ್ಯಾಂಕಿನೊಡನೆ ಓವರ್‌ಡ್ರಾಫ್ಟ್ ಹೊಂದಿಲ್ಲವೆಂದು ಶಾಸನಸಭೆಯಲ್ಲಿ ತಿಳಿಸಲಾಯ್ತು

ಅಷ್ಟಾವಧಾನಿ

ಬೆಂಗಳೂರು— ಅಷ್ಟಾವಧಾನವನ್ನು ತೆಲಗುವಿನಲ್ಲಿ ನೇರಲ ರಾಮರೆಡ್ಡಿಯವರು ವೈಶ್ಯ ಹಾಸ್ಪಟ್ಲಿನಲ್ಲಿ ಭಾನುವಾರ ಸಂಜೆ ಪ್ರದರ್ಶಿಸುವರು – ಒಂದೇ ಸಾರಿ 8 ಜನ ಪಂಡಿತರ ಪ್ರಶ್ನೆಗಳಿಗೆ ಉತ್ತರಗಳನ್ನು ಪದ್ಯ ರೂಪದಲ್ಲಿ ತಿಳಿಸುವರು.

○

ಕಚ್ ಪ್ರಕರಣ

ನವದೆಹಲಿ— ಕಚ್ ತೀರ್ಪಿನ ವಿರುದ್ಧ ಸುಪ್ರೀ ಕೋರ್ಟಿನಲ್ಲಿ ಹಾಕಿದ್ದ ರಿಟ್ ಅರ್ಜಿಗಳು ವಜಾಮಾಡಲ್ಪಟ್ಟವು.

★

ಬದಲಾವಣೆಯಿಲ್ಲ

ನವದೆಹಲಿ— ಏ ಐ ಆರ್ ಹಿಂದಿ ವಾರ್ತಾ ಪ್ರಸಾರದ ಕಾಲದಲ್ಲಿ ಬದಲಾವಣೆ ಯೋಜಿಸಿಲ್ಲವೆಂದು ಪ್ರಕಟವಾಗಿದೆ.

ವಿಚಾರಣೆ ಎದುರಿಸಬೇಕು

ಬೆಂಗಳೂರು— ಶ್ರೀ ನಿಜಲಿಂಗಪ್ಪನವರು ಮುಖ್ಯ ಮಂತ್ರಿಯಾಗಿದ್ದಾಗ ಅವರ ಮೇಲೆ ವಿರೋಧ ಶಾಸಕರು ಮಾಡಿದ್ದ ಆಪಾದನೆ ಬಗ್ಗೆ ವಿಚಾರಣೆಯನ್ನು ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಎದುರಿಸಲೇಬೇಕೆಂದು ಹಿಪ್ಪಿ ನ್ಯಾಯಕ ಶ್ರೀ ಹೆಚ್ ವಿ ಕಾಮತ್ ಹೇಳಿದರು.

★

ಎತ್ತಿತ್ತರ ಮನೆ

ಬೆಂಗಳೂರು— ಸೆಂಟ್ರಲ್ ಕೊಆಪರೇಟಿವ್ ಬ್ಯಾಂಕಿನ ವಜ್ರ ಮಹೋತ್ಸವದ ರೂ 1.75 ಲಕ್ಷ ಕಟ್ಟಡದ ಅಸ್ತಿಭಾರ ಸಮಾರಂಭ ನೆರವೇರಿಸುತ್ತಾ, ಮುಜ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು– ಎತ್ತಿತ್ತರ ಮನೆ ಕಟ್ಟುವುದರಲ್ಲಿ ಈ ಬ್ಯಾಂಕು ಮೇಲ್ಪಂಗ್ತಿಯಾಗಲೆಂದು ಆಶಿಸಿದರು – ತಾವು ಹಾಸಿಂಗು ಬೋರ್ಡಿಗೂ ಸೂಚಿಸುವುದಾಗಿ ಹೇಳಿದರು.

ಆಹ್ಲಾದಕರ ಸುವಾಸನೆ

ಮೈಸೂರು ಗಂಧದ ಎಣ್ಣೆಯು ತನ್ನ ಶ್ರೇಷ್ಠತೆಯಿಂದ ಜಗದ್ವಿಖ್ಯಾತಿಯನ್ನು ಪಡೆದಿದೆ.

★

ಪರಿಶುದ್ಧವಾದ ಗಂಧದ ಎಣ್ಣೆಯು ಮೈಸೂರು ಸರ್ಕಾರದ ಸೀಲು ಮತ್ತು ಲೇಬಲ್‌ಗಳುಳ್ಳ ಸೀಸೆಗಳಲ್ಲಿ ಮಾತ್ರ ದೊರೆಯುತ್ತವೆ.

ಮೈಸೂರು ಸರ್ಕಾರದ ಗಂಧದ ಎಣ್ಣೆ ಕಾರ್ಖಾನೆ.

ಮೈಸೂರು ಮತ್ತು ಶಿವಮೊಗ್ಗ

ಸಹಪ್ರಗಟ್ಟೆ ಸ್ಪರ್ಧೆಗಳು

ಕಲ್ಕತ್ತಾ— ಪಶ್ಚಿಮ ಬಂಗಾಳ ಶಾಸನ ಸಭೆಯ 280 ಸ್ಥಾನಗಳಿಗೆ 1000 ಕ್ಕೂ ಹೆಚ್ಚು ಮಂದಿ ಸ್ಪರ್ಧಿಸಿರುವರು ; ಚುನಾವಣೆ ಫೆಬ್ರವರಿ 29 ರಂದು ನಡೆಯುವುದು.

ಉತ್ತರ ಪ್ರದೇಶದಲ್ಲಿ 425 ಸ್ಥಾನಗಳ ಶಾಸನಸಭಾ ಚುನಾವಣೆಗೆ 6000 ಕ್ಕೂ ಹೆಚ್ಚು ಮಂದಿ ಉಮೇದುವಾರರಿದ್ದಾರೆ.

●

ಕುಟುಂಬ ಯೋಜನೆಗೆ ಪೋಲೀಸರಿಲ್ಲ

ಚಂಡಿಘರ್— ಕುಟುಂಬ ಯೋಜನಾ ಚಳವಳಿಯಿಂದ ಪೋಲೀಸರು ದೂರವಿರಬೇಕೆಂದು ಹರಿಯಾಣಾ ಸರ್ಕಾರ ಎಚ್ಚರಿಸಿದೆ

★

ಭುಟ್ಟೋ ಪ್ರಕರಣ

ಕರಾಚಿ— ಮಾಜಿ ವಿದೇಶಾಂಗ ಮಂತ್ರಿ ಭುಟ್ಟೋರ ಬಿಡುಗಡೆ ಅರ್ಜಿ ವಿಚಾರಣೆ ನಡೆಯಾಗುತ್ತಿದ್ದಾಗ ಭುಟ್ಟೋ ಹೊರಟು ಹೊರಟುಹೋಗಲು ಪ್ರಯತ್ನಿಸಿದರು ; ಆಗ ಜಡ್ಜರು ಇದು ರಾಜಕೀಯ ಪ್ಲಾಟ್‌ಫಾರಂ ಅಲ್ಲ, ನ್ಯಾಯಾಸ್ಥಾನ ಎಂದು ಎಚ್ಚರಿಸಿದರು.

★

ಸಹಕಾರ ಇಲಾಖೆ ಅನಾವಶ್ಯಕ

ಬೆಂಗಳೂರು— ಸಹಕಾರ ಸಂಸ್ಥೆಗಳನ್ನು ನಡೆಸುವುದರಲ್ಲಿ ಸಹಕಾರಿಗಳು ಪ್ರಾಮಾಣಿಕತೆ, ಸ್ವಶಿಸ್ತು ಜಾರಿಗೆ ತಂದರೆ, ಹೆಚ್ಚು ಸುಂದಿ ಅಧಿಕಾರಿಗಳು ನೌಕರರು ಸಹಕಾರ ಇಲಾಖೆಯ ಆವಶ್ಯಕತೆಯೇ ಇಲ್ಲವೆಂದು ಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗ್ಡೆಯವರು ಹೇಳಿದರು – ವಿಶ್ವದಲ್ಲೆಲ್ಲೂ ಸಹಕಾರ ಇಲ್ಲವೆಂದು ಹೇಳಿದರು.

ಪತ್ರಿಕಾ ಗೋಷ್ಠಿ

ಮೈಸೂರು— ಪತ್ರಿಕಾಗೋಷ್ಠಿಯಲ್ಲಿ ನಗರಸಭಾಧ್ಯಕ್ಷ ಶ್ರೀ ಬಿ. ಸಿ. ಲಿಂಗಯ್ಯ ಅವರು ತಮ್ಮ ನಡೆಸಿರುವ ಎಲ್ಲ ವಿಷಯಗಳನ್ನು ವಿವರಿಸಿದರು – ಅಧ್ಯಕ್ಷ ಉಪಾಧ್ಯಕ್ಷ ಚುನಾವಣೆಯಲ್ಲಿ ಒಂದು ವೇಳೆ ಕಾಂಗ್ರೆಸ್ ಪಕ್ಷ ಸೋತಲ್ಲಿ, ಬರಲಿರುವ ಆಡಳಿತ ಪಕ್ಷಕ್ಕೆ ಸಂಪೂರ್ಣ ಸಹಕಾರವನ್ನು ಬೆಂಬಲ ನೀಡಲಾಗುವುದೆಂದು ತಿಳಿಸಿದರು.

ಘರ್ಷಣೆ

ಬೊಂಬಾಯಿ— ಕುರ್ಲಾ ಮತ್ತು ಗಾನ ಭಾಗಗಳಲ್ಲಿ ಶಿವಸೇನೆ ಮತ್ತಿತರರಲ್ಲಿ ಆತ ಘರ್ಷಣೆ ಘಟನೆಗಳಿಗಾಗಿ 5 ಜನರಿಗೆ ಪೊಲ್ಪಟ್ಟು ಸೇರುವದು ಮತ್ತು ಮೆರವಣಿಗೆ ಇತ್ಯಾದಿ ನಡೆಸುವದು ಪ್ರತಿಬಂಧಿಸಲಾಗಿದೆ – ಒಬ್ಬ ಸತ್ತು 40 ಮಂದಿ ಗಾಯಗೊಂಡರು – ಶಿವಸೇನಾ ಸ್ವಯಂಸೇವಕರೂ ಸೇರಿ 53 ಮಂದಿಯ ದಸ್ತಗಿರಿಯಾಗಿದೆ.

ಪ್ರಯಾಣಿಕರಿಗೆ ಬೇಕಾದ ಕಿಟ್ ಬ್ಯಾಗ್, ಹೋಲ್ಡ್ ಆಲ್, ಕ್ವಿಲ್ಟ್, ಏರ್‌ಪಿಲ್ಲೋ, ಸೂಟ್ ಕೇಸ್, ಟ್ರಂಕು ಮುಂತಾದವುಗಳಿಗೆ ಮೈಸೂರಿನ ಬ್ಯಾಂಕ್ ರೋಡ್ ಬಾಹುಸಾರ್ ಜ್ಞಾಪಕವಲ್ಲಿಡಿ. ಒಂದೇ ಬೆಲೆ, ನ್ಯಾಯವಾದ ಬೆಲೆ ಮತ್ತು ನಿಮಗೆ ಅನುಕೂಲವಾದ ಬೆಲೆ.

ವಿಶ್ವಸಂಸ್ಥೆ ಕಾಗದಪತ್ರಗಳು

ವಿಶ್ವಸಂಸ್ಥೆ— ವಿಶ್ವಸಂಸ್ಥೆ ಪ್ರಮುಖ ಕಚೇರಿಯಲ್ಲಿ 1963 ರಲ್ಲಿ ಹೊರಬಿದ್ದ ಕಾಗದಪತ್ರಗಳು 526 ಮಿಲಿಯ ಪುಟಗಳಿದ್ದು 1738 ಟನ್ ತೂಕವಿದ್ದಿತು : 1967 ರಲ್ಲಿ 572 ಮಿಲಿಯ ಪುಟಗಳಿದ್ದು ಅದಕ್ಕೂ ಹೆಚ್ಚು ತೂಕವಿದ್ದಿತು.

●

ವಿದ್ಯಾರ್ಥಿಗಳ ರೈಲು ನಿಲ್ಲಿಸಿದರು

ಮದರಾಸು— ತಮಿಳುನಾಡಿನಲ್ಲಿ ವಿದ್ಯಾರ್ಥಿಗಳು ಏಐಟಿಯು ನೀತಿ ಪ್ರತಿಭಟನೆ ಚಳುವಳಿಯಲ್ಲಿ ದಕ್ಷಿಣ ರೈಲುಗಳಲ್ಲಿ ಗುರುವಾರ 25 ಸಾರಿ ಎಕ್ಸ್‌ಪ್ರೆಸ್ ಮತ್ತು ಪ್ರಯಾಣಿಕರ ರೈಲುಗಳನ್ನು 5 ನಿಮಿಷದಿಂದ 2 ಗಂಟೆವರೆಗೆ ನಿಲ್ಲಿಸಿದರು.

○

ಕಾವರಾಜರ ವಿಜಯ

ನಾಗರಕೋಯಿಲ್— ಕಾರ್ಲಿಮೆಂಟ್ ಗೆ ಶ್ರೀ ಕಾಮರಾಜರು ಆಯ್ಕೆಯಾದರು – ಇವರ ವಿರುದ್ಧ ಸ್ಪರ್ಧಿಸಿದ್ದವರಲ್ಲಿ ನಾಲ್ಕು ಮಂದಿ ಡಿಪಾಜಿಟ್ ಕಳೆದುಕೊಂಡರು

●

ಜಾಕಿರ್ಬೈ

ವಾಷಿಂಗ್ಟನ್— ಪುನರ್ವಿವಾಹ ಮಾಡಿಕೊಂಡ ಮಾಜಿ ಅಧ್ಯಕ್ಷ ಕೆನಡಿಯವರ ವಿಧವೆ ಜಾಕಿ ತಳಗೆ ಕೊಡಲಾಗುತ್ತಿದ್ದ ವಾರ್ಷಿಕ ಪೆಷನ್ನನ್ನು ಬಿಟ್ಟುಬಿಟ್ಟರು.



Help The Gorakshana

Quality Printing — Neat Binding

Lakshminarasimha Press

Sivarampet, Mysore

SHAKTI SUDHA

A Superb Tonic

ವುಡ್‌ಲ್ಯಾಂಡ್ಸ್ ಜಯಪ್ರದ 4ನೇ ವಾರ

ಅದ್ಭುತ, ಅಸಮಾನ, ಅಸಾಧಾರಣ ಸಿಲಂಗೀತಿನ ವ್ಯಕ್ತಿಗಳ ವೈಭವಪೂರಿತ ಆಗಮನ

— ಜೆಮಿನಿಯವರ ಹಾಸ್ಯಮಯ ವರ್ಣರಂಜಿತ ಚಿತ್ರ (ಹಿಂದಿ) —

ತೀನ್ ಬಹುರಾಣಿಯಾ

ತಾರಾಗಣ — ಸಾಹುಕಾರ್ ಜಾನಕಿ, ಕಾಂಚನ, ಜಯಂತಿ, ಶಶಿಕಲಾ, ಆಘಾ, ರಮೇಶ್‌ದೇವ್, ರಾಜೇಂದ್ರನಾಥ್, ಪೃಥ್ವಿರಾಜ್ ಕಪೂರ್

[ದಿನ 3 ಪ್ರದರ್ಶನಗಳು]

ಆಪೆರಾ— 10-1-69 ರಿಂದ

— ಆತ್ಯಮೋಘ ತಮಿಳು ಚಿತ್ರ —

ಕಾದಲ್ ವಾಹನಂ

ನಟವರ್ಗ— ಎಂ ಜಿ ರಾಮಚಂದ್ರ, ತಾಯ್ ನಾಗೇಶ್, ಅಶೊಕ್ರ ಸ್ಯಾಂಡೋ ಚಿನ್ನಪ್ಪದೇವರ್, ಸುಂದರರಾಜ್ ಜಯಲಲಿತ, ಮನೋರಮ

.... ದಿನವಹಿ 3 ಆಟಗಳು ....

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah, Sri Madhav Shenoi Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Protect the Cow

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4